ದಿನಾಂಕಃ 13-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ,

1) ಆರೋಪಿ ನಮ್ಮ ಗ್ರಾಮದವರಾಗಿದ್ದರಿಂದ ಪರಿಚಯ ಆಗಿರುತ್ತಾರೆ. ಆರೋಪಿ ಈಗ ಬೆಂಗಳೂರಿನಲ್ಲಿ ವಾಸವಾಗಿರುತ್ತಾರೆ. ಆರೋಪಿ ಬೆಂಗಳೂರಿನಲ್ಲಿ ವಾಸವಿದ್ದು, ನಿಖರವಾದ ವಿಳಾಸ ಗೊತ್ತಿರುವುದಿಲ್ಲ. ತಿಳುವಳಿಕೆ ಪತ್ರ ಆರೋಪಿ ನಾನು ನೀಡಿರುವ ವಿಳಾಸದಲ್ಲಿ ವಾಸವಿರುವುದಿಲ್ಲ ಎಂದು ವಾಪಸ್ಸು ಬಂದಿರುತ್ತದೆ ಎಂದರೆ ಸರಿ. ಆರೋಪಿ 20 ನೇ ಮುಖ್ಯ ರಸ್ತೆ, ಕೆಂಪೇಗೌಡ ಬಡಾವಣೆ, ಲಗ್ಗೇರೆ, ಬೆಂಗಳೂರು ಇಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ನಾನು ಸದರಿ ವಿಳಾಸಕ್ಕೆ ತಿಳುವಳಿಕೆ ಪತ್ರ ಕಳುಹಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಸರಿಯಾದ ಳಿಳಾಸಕ್ಕೆ ತಿಳುವಳಿಕೆ ಪತ್ರ ಕಳುಹಿಸಿದ್ದರೆ, ಆರೋಪಿ ಪ್ರತ್ಯುತ್ತರ ನೀಡುತ್ತಿದ್ದರು ಎಂದರೆ ಸರಿಯಲ್ಲ.

2) ನನ್ನ ತಂದೆ ಆರೋಪಿಗೆ ಸರ್ವೇ ನಂ. 29/3 ರಲ್ಲಿರುವ 1 ಎಕರೆ 9 ಗುಂಟೆ ಆಸ್ತಿಯನ್ನು ಮಾರಾಟ ಮಾಡುತ್ತೇವೆ ಎಂದು ಹೇಳಿ ಕರಾರು ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಬಗ್ಗೆ ವಿವಾದ ಇರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಕರಾರುಪತ್ರ ಬರೆದು ಕೊಡುವ ಕಾಲಕ್ಕೆ ಆರೋಪಿಯಿಂದ ನಾನು ಮತ್ತು ನಮ್ಮ ಕುಟುಂಬ ಸದಸ್ಯರು ಆರೋಪಿಗೆ ಸೇರಿದ ಒಂದು ಚೆಕ್ಕನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿ ನನ್ನ ತಂದೆ ಮತ್ತು ನಮ್ಮ ಕುಟುಂಬ ಸದಸ್ಯರ ಪರವಾಗಿ ಕರಾರು ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಈ ಹಂತದಲ್ಲಿ ಒಂದು ಒಪ್ಪಿಗೆ ಪತ್ರವನ್ನು ತೋರಿಸಲಾಗಿ ಸದರಿ ಕರಾರುಪತ್ರದಲ್ಲಿ ತನ್ನ ಸಹಿಯನ್ನು ಒಪ್ಪಿಕೊಂಡ ಕಾರಣ ಸದರಿ ದಾಖಲೆಯನ್ನು ನಿಶಾನೆ.ಡಿ-1 ಎಂದು ಗುರುತಿಸಲಾಯಿತು ಮತ್ತು ಸಹಿಯನ್ನು ನಿಶಾನೆ.ಡಿ-1(ಎ) ಎಂದು ಗುರುತಿಸಲಾಯಿತು.

3) ನಿಶಾನೆ ಡಿ-1 ಕರಾರು ಪತ್ರದಲ್ಲಿ ನಮೂದು ಮಾಡಿರುವ ರೂ. 2 ಲಕ್ಷ ಹಣವನ್ನು ಆರೋಪಿ ನನ್ನ ತಂದೆಗೆ ಮರುಪಾವತಿ ಮಾಡಿದ ನಂತರ ಮೂಲ ಕರಾರು

ಪತ್ರವನ್ನು ಆರೋಪಿಗೆ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕರಾರು ಪತ್ರದಡಿಯಲ್ಲಿ ಆರೋಪಿಯಿಂದ ನನ್ನ ತಂದೆ ಪಡೆದ ಚೆಕ್ಕನ್ನು ನನ್ನ ಮೂಲಕ ಈ ಪ್ರಕರಣದ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ನಿಶಾನೆ ಪಿ-5 ಅಂಚೆ ಲಕೋಟೆಯ ಮೇಲೆ ಆರೋಪಿಯ ದೂರವಾಣಿ ಸಂಖ್ಯೆ ನಮೂದು ಮಾಡಿರುವುದಿಲ್ಲ.

4) ಆರೋಪಿ ನಮ್ಮ ಮನೆಗೆ ಬಂದು ರೂ. 2 ಲಕ್ಷ ಹಣ ಬೇಕು ಎಂದು ಕೇಳಿರುತ್ತಾರೆ. ಆರೋಪಿ ನನ್ನ ಬಳಿ ಬಂದು ಹಣ ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ನಿಶಾನೆ ಪಿ-1 ಚೆಕ್ಕನ್ನು ನಾನೇ ತುಂಬಿಸಿ ಬ್ಯಾಂಕಿಗೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಶಾನೆ ಪಿ-1 ಚೆಕ್ಕನ್ನು ನನ್ನ ತಂದೆಗೆ ಕರಾರು ಪತ್ರದ ಬಾಕಿ ಹಣದ ಭದ್ರತೆಗಾಗಿ ನೀಡಲಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ ಹಣಕಾಸಿನ ವ್ಯವಹಾರ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ